ಪಿಡಬ್ಲ್ಯೂಃ 1

ಇಂದು ದಿನಾಂಕ:24.10.2019 ರಂದು ಪಿಡಬ್ಲ್ಯೂಃ1 ರವರನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

<u>**ಪಾಟೀ ಸವಾಲುಃ**</u> ಪ್ರತಿವಾದಿಯ ಪರ ಶ್ರೀ ಎಸ್.ಎಚ್.ಕೆ ವಕೀಲರಿಂದಃ

1. ಜಾಫರ ನನ್ನ ತಮ್ಮನಾಗಬೇಕು, ಸಬ್ರಿನ್ ನನ್ನ ಹೆಂಡತಿಯಾಗಬೇಕು. ದಿವಾನಬೀ ಕೋಂ ಜಮಾಲ್‌ಸಾಬ ರಿಕಾಟೆ ನನ್ನ ಅಜ್ಜಿ ಅಂದರೆ ನನ್ನ ತಂದೆಯ ತಾಯಿ ಇರುತ್ತಾರೆ. ನನ್ನ ವಾದ ಪತ್ರದಲ್ಲಿ ವಂಶಾವಳಿಯನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಸದರಿರವರು ನನ್ನ ಅಜ್ಜಿ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮೂಲತಃ ನನ್ನ ತಂದೆ ಹಜರತ್‌ಸಾಬ ರವರಿಗೆ ಸೇರಿದ್ದು. ಸದರಿ ನನ್ನ ತಂದೆಗೆ ಅವರ ತಾಯಿಯಿಂದ ಬಂದಿತು. ಸದರಿ ದಾವಾ ಆಸ್ತಿಯನ್ನು ನನ್ನ ಅಜ್ಜಿ ಐರಣಿರವರಿಂದ ಖರೀದಿ ಮಾಡಿರುತ್ತಾರೆ. ದಾವಾ ಆಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮ 9 ಮೊಳ, ಉತ್ತರ-ದಕ್ಷಿಣ 146 ಮೊಳ ಇರುತ್ತದೆ. ನಾನು ಆ ರೀತಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಖರೀದಿ ಪತ್ರದಲ್ಲಿ ದಾವಾ ಆಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮ 6 ಮೊಳ ಎಂದು ನಮೂದು ಇದ್ದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಮತ್ತು ನನ್ನ ಸಹೋದರರು ಕೂಡಿ ಇದ್ದೇವೆ. ನಾನು ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಂಚಾಯತಿ ನಂಃ533, 534 ಎ ಮತ್ತು ಬಿ ಇರುತ್ತದೆ. ಆಸ್ತಿ ನಂಃ533 ನನ್ನ ಮತ್ತು ಸಹೋದರರ ಹೆಸರಿಗೆ ಜಂಟಿ ಇದೆ. ಆಸ್ತಿ ನಂಃ534 ಎ ನನ್ನ ಹೆಂಡತಿ ಹೆಸರಿಗೆ ಖಾತೆ ಇರುತ್ತದೆ. ಆಸ್ತಿ ನಂಃ534 ಬಿ ನನ್ನ ಹೆಸರಿಗೆ ಖಾತೆ ಇರುತ್ತದೆ. ನಾನು ಮತ್ತು ನನ್ನ ಅಣ್ಣ-ತಮ್ಮಂದಿರು ಕೂಡಿ ಇರದೇ ಇದ್ದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿದ 2012-13 ಕ್ಕಿಂತ ಮೊದಲಿನ ಉತಾರಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿಯು ಮುಂದುವರೆದು ಎಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಅಜ್ಜಿ ಮತ್ತು ನನ್ನ ತಂದೆ ಹೆಸರಿಗೆ ಖಾತೆ ದಾಖಲಿದ್ದ ದಾಖಲಾತಿಗಳನ್ನು ನಾನು ಹಾಜರುಪಡಿಸಿದ್ದೇನೆ. ನಾನು ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಿವಾನಬೀರವರಿಗೆ ರಿಕಾಟೆ ಎಂಬ ಅಡ್ಡ ಹೆಸರು ಇರುವುದರಿಂದ, ಸದರಿರವರು ನಮ್ಮ ಅಜ್ಜಿ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಗ್ರಾಮ ಠಾಣಾ ಆಸ್ತಿ ಎಂದರೆ ಸರಿ. ಸದರಿ ಆಸ್ತಿಗೆ ಅಳತೆ ಇಲ್ಲ ಎಂದರೆ ಸರಿಯಲ್ಲ. ನಮ್ಮ ಆಸ್ತಿಯ ಉತ್ತರದ ಹಂಚಿಗೆ ನಾವು ಕಟ್ಟಿಸಿದ ಶೌಚಾಲಯ ಇರುತ್ತದೆ ಎಂದರೆ ಸರಿ. ಸದರಿ ಶೌಚಾಲವನ್ನು ನಮ್ಮ ಆಸ್ತಿಯ ಕೊನೆಯಲ್ಲಿ ಕಟ್ಟಿಸಿದ್ದೇವೆ ಎಂದರೆ ಸರಿಯಲ್ಲ. ಶೌಚಾಲಯದ ಉತ್ತರಕ್ಕೆ ನಮ್ಮ ಯಾವುದೇ ಆಸ್ತಿ ಇಲ್ಲ ಎಂದರೆ

ಸರಿಯಲ್ಲ. ನನ್ನ ಆಸ್ತಿಯ ಉತ್ತರಕ್ಕೆ ಪ್ರತಿವಾದಿ ಶಾಲೆಯ ಆಟದ ಮೈದಾನ ಇದೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ನನ್ನ ಆಸ್ತಿಯ ಉತ್ತರಕ್ಕೆ ಪ್ರತಿವಾದಿಗೆ ಸೇರಿದ ಆಸ್ತಿ ಇದೆ ಎಂದು ಬರೆಸಿರುವುದಿಲ್ಲ.. ಪ್ರತಿವಾದಿಯ ಶಾಲೆ ಸುಮಾರು 45-50 ವರ್ಷಗಳಿಂದ ಇದೆ.

4. ನಮ್ಮ ಆಸ್ತಿಯ ಉತ್ತರಕ್ಕೆ ಇರುವ 269/270+277/2 ಅ+2 ಬ+2 ಕ ವಿಸ್ತೀರ್ಣ 11 ಎಕರೆ 2 ಗುಂಟೆಯಲ್ಲಿ ದಕ್ಷಿಣದ 1 ಎಕರೆ 3 ಗುಂಟೆಯ ಪ್ರತಿವಾದಿಯ ಸಂಘಗೆ ರಾಮನಗೌಡರವರು ದಾನ ನೀಡಿದ್ದಾರೆ ಎಂದರೆ ಸರಿ. ಸದರಿ ಆಸ್ತಿ ಮತ್ತು ನಮ್ಮ ಆಸ್ತಿಯನ್ನು ಬೆರ್ಪಡಿಸಲು ಬೇಲಿ ಮತ್ತು ದೊಡ್ಡ ದೊಡ್ಡ ಮರಗಳಿದ್ದವು ಎಂದರೆ ಸರಿಯಲ್ಲ. ರಾಮನಗೌಡರವರು ಭಕ್ಷಿಸು ನೀಡಿದ ಆಸ್ತಿಯನ್ನು ಪ್ರತಿವಾದಿ ಸಂಘ ಶಾಲಾ ಮಕ್ಕಳ ಆಟದ ಮೈದಾನ ಎಂದು ಬಳಸುತ್ತಿದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಪ್ರತಿವಾದಿಯರು ನಮ್ಮ ಆಸ್ತಿಯ ಕಡೆಗೆ 12 ಅಡಿ ಜಾಗವನ್ನು ಬಿಟ್ಟು ಸೈಕಲ್ ಸ್ಟ್ಯಾಂಡ್ ನಿರ್ಮಿಸಲು ಮುಂದಾದಾಗ ನಾವು ಅವರಿಗೆ ತೊಂದರೆ ಮಾಡಿರುತ್ತೇವೆ ಎಂದರೆ ಸುಳ್ಳು.

5. ನಮ್ಮ ವಾದ ಚಪತ್ರದಲ್ಲಿ ಪ್ರತಿವಾದಿ ಎಷ್ಟು ಕೆಡೇತ್ರವನ್ನು ಅತೀ ಕ್ರಮಣ ಮಾಡಿ ಕಂಪೌಂಡನ್ನು ನಿರ್ಮಿಸಲು ನಮೂದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ಪ್ರತಿವಾದಿ ಅತೀಕ್ರಮಣ ಮಾಡಿದ ಕ್ಷೇತ್ರದ ಚಕ್ಕುಬಂದಿ ನನಗೆವ ಹೇಳಲು ಬರುವುದಿಲ್ಲ. ನಮ್ಮ ಮನೆಗಳು ದಕ್ಷಿಣಕ್ಕೆ ಮುಖ ಮಾಡಿರುತ್ತವೆ. ನಮ್ಮ ಆಸ್ತಿಯಲ್ಲಿರುವ ಮನೆಗಳ ವಿಸ್ತೀರ್ಣ ಮತ್ತು ಖುಲ್ಲಾ ಜಾಗದ ವಿಸ್ತೀರ್ಣವನ್ನು ನಿರ್ದಿಷ್ಟವಾಗಿ ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ ನಾನು ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಸಂಘ ಶಿಕ್ಷಣ ಸಂಸ್ಥೆ ಎಂದರೆ ಸರಿ. ಪ್ರತಿವಾದಿ ಯಾವುದೇ ಕೃತ್ಯಗಳನ್ನು ಮಾಡದಿದ್ದರೂ ಸಹ ಅವರಿಗೆ ತೊಂದರೆ ನೀಡಬೇಕು ಮತ್ತು ಅವರ ಆಸ್ತಿಯನ್ನು ಎತ್ತಿ ಹಾಕಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಮ್ಮ ಆಸ್ತಿಯನ್ನು ಏಂದಿಗೂ ಅತೀಕ್ರಮಣ ಮಾಡಿಲ್ಲ ಎಂದರೆ ಸರಿಯಲ್ಲ ನಾವೇ ಅವರ ಆಸ್ತಿಯನ್ನು ಅತೀಕ್ರಮಣ ಮಾಡಿರುತ್ತೇವೆ ಎಂದರೆ ಸರಿಯಲ್ಲ.

6. ನಾರಾಯಣ ಶೆಟ್ಟರ ಜಾಗದ ಪಶ್ಚಿಮವ ದಿಕ್ಕಿಗೆ ಇರುವ ಉತ್ತರ-ದಕ್ಷಿಣ ರಸ್ತೆಯ ಮೂಲಕ ಪ್ರತಿವಾದಿ ಶಾಲೆಯ ಆಟದ ಮೈದಾನಕ್ಕೆ ಬರಲು ಗೇಟ್ ಇದೆ ಎಂದರೆ ಸರಿ. ನಾರಾಯಣ ಶೆಟ್ಟರವರ ಮನೆಯ ಹತ್ತಿರ ಹಳೆ ಕಂಪೌಂಡ್ ಇದೆ ಎಂದರೆ ಸರಿ . ಸದರಿ ಕಂಪೌಂಡ್ ಪೂರ್ವ-ಪಶ್ಚಿಮವಾಗಿದೆ ಎಂದರೆ ಸಾಕ್ಷಿಯ ಉತ್ತರ-ದಕ್ಷಿಣವಾಗಿದೆ ಎಂದು ನುಡಿಯುತ್ತಾರೆ. ನಾನು ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2001 ರಲ್ಲಿ ರಟ್ಟೀಹಳ್ಳಿ ಗ್ರಾಮ ಪಂಚಾಯತಿ ವತಿಯಿಂದ ಕ್ರೀಡಾ ಇಲಾಖೆರವರು ಒಂದು ಸ್ಟೇಡಿಯಮ್ ನಿರ್ಮಾಣ

ಮಾಡಲು ನೀಲಿ ನಕ್ಷೆ ತಯಾರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ತಮ್ಮ ಶಾಲಾ ಮೈದಾನದಲ್ಲಿ ತಾಲೂಕು ಮಟ್ಟದ ಕ್ರೀಡಾ ಚಟುವಟಿಗಳನ್ನು ಆಯೋಜಿಸುತ್ತಿದ್ದರು ಎಂದರೆ ಸರಿ.

7. ಆಸ್ತಿ ನಂಃ533, 534 ಎ, 534 ಬಿ ಆಸ್ತಿಗಳ ಚಕ್ಕುಬಂದಿ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ನಿಪಿ-2 ನಾವು ಪ್ರತಿವಾದಿಯ ಶಿಕ್ಷಣ ಸಂಸ್ಥೆಗೆ ತೊಂದರೆ ಮಾಡುತ್ತಿರುವ ಕುರಿತು ಇರುವ ಪತ್ರಿಕಾ ಪೋಟೋ ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ಜಾಗವನ್ನು ಅತೀಕ್ರಮಣ ಮಾಡಿ ಯಾವುದೇ ಜೆ.ಸಿ.ಬಿ ತಂದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಶಿಕ್ಷಣ ಸಂಸ್ಥೆಯು ಸಾರ್ವಜನಿಕ ಶಿಕ್ಷಣ ಸಂಸ್ಥೆ ಇದ್ದು, ಸದರಿರವರ ಆಸ್ತಿಯನ್ನು ನಾವು ಕಬಳಿಸಬೇಕೆಂಬ ಉದ್ದೇಶದಿಂದ ನಾನು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರರು ಬೇರೆಯಾಗಿದ್ದು, ಅವರ ಪರವಾಗಿ ದಾವೆ ಮಾಡಲು ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಮ್ಮ ಸಹೋದರರು ಅವರ ಪರವಾಗಿ ಸಾಕ್ಷ್ಯ ನುಡಿಯಲು ಪವರ್ ಆಫ್ ಪಟಾನಿ ಬರೆದುಕೊಟ್ಟಿರುವುದಿಲ್ಲ. ನಾವು ಪ್ರತಿವಾದಿಯರ ವಿರುದ್ಧ ಖೊಟ್ಟಿ ದಾವೆ ಮಾಡಿದ್ದರಿಂದ, ನಾವು ನಷ್ಟ ಪರಿಹಾರ ನೀಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.